ಅಧ್ಯಕ್ಷರು:– ಶ್ರೀ ಕೆ. ರಾಜಣ್ಣ ಹಾಜರಿಲ್ಲ. ಶ್ರೀ ಹೆಚ್.ಕೆ. ಕುಮಾರಸ್ವಾಮಿಯವರು ಮಾತನಾಡುವುದು.

6. ವಿಷಯ: ರಸ್ತೆ ಕಾಮಗಾರಿ ಬಗ್ಗೆ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ (ಸಕಲೇಶಪುರ):– ಮಾನ್ಯ ಅಧ್ಯಕ್ಷರೆ, ಸಕಲೇಶಪುರ ತಾಲ್ಲೂಕಿನಲ್ಲಿ ಒಣಗೂರು ಜನ್ನಾಪುರ ಎಂಬ ರಸ್ತೆ, ಹಾನಬಾಳ್, ಆನೆಮಾಲ್, ಹೆತ್ತೂರು ಮಾರ್ಗವಾಗಿ ಹೋಗುವಂಥದ್ದು. ಮಾನ್ಯ ಲೋಕೋಪಯೋಗಿ ಸಚಿವರೆ ಬಂದು ಗುದ್ದಲಿ ಪೂಜೆ ಮಾಡಿ ಎರಡು ತಿಂಗಳು ಆಗಿದೆ. ಇದುವರೆಗೂ ಪ್ರಾರಂಭವಾಗಿಲ್ಲ. ಅಲ್ಲಿನ ಜನರು ಪ್ರತಿಭಟನೆ ಮಾಡುತ್ತಿದ್ದಾರೆ. ಯಾವಾಗ ಪ್ರಾರಂಭ ಮಾಡುತ್ತೀರಿ? Work order issue ಮಾಡಿದ್ದೀರೋ ಇಲ್ಲವೋ ಎನ್ನುವುದನ್ನು ದಯಮಾಡಿ ಹೇಳಿ.

ಶ್ರೀ ಟಿ.ಬಿ. ಜಯಚಂದ್ರ:– ಮಾನ್ಯ ಅಧ್ಯಕ್ಷರೆ, ಈ ವಿಚಾರವನ್ನು ಲೋಕೋಪಯೋಗಿ ಇಲಾಖೆಯ ಸಚಿವರ ಗಮನಕ್ಕೆ ತಂದು ಅವರಿಂದಲೇ ಉತ್ತರ ಕೊಡಿಸುತ್ತೇನೆ.

ಅಧ್ಯಕ್ಷರು:– ಆಯಿತು.

7. ವಿಷಯ: ನಿವೃತ್ತರಾದ ಸೈನಿಕರಿಗೆ ನಿಡಲಾಗುತ್ತಿರುವ ವಿವಿಧ ಸೌಲಭ್ಯಗಳನ್ನು ಅರೆ ಸೇನಾಪಡೆ ಯೋಧರಿಗೆ ನೀಡುವ ಬಗ್ಗೆ.

ಶ್ರೀ ಕೆ.ಜಿ. ಬೋಪಯ್ಯ (ವಿರಾಜಪೇಟೆ):– ಮಾನ್ಯ ಅಧ್ಯಕ್ಷರೆ, ರಕ್ಷಣಾ ವ್ಯವಸ್ಥೆಯನ್ನು ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದ ಸೈನಿಕರಿಗೆ ನೀಡಲಾಗುವ ವಿವಿಧ ಸೌಲಭ್ಯಗಳನ್ನು ಅರೆ ಸೇನಾ ಪಡೆಯ ಯೋಧರಿಗೂ ಸಹ ವಿಸ್ತರಿಸುವುದು ಅವಶ್ಯಕತೆ ಇದೆ. ಈ ನಿಟ್ಟಿನಲ್ಲಿ ಅರೆಸೇನಾಪಡೆಗೆ ಸಂಬಂಧಿಸಿದ ಬಿಎಸ್ಎಫ್, ಸಿಆರ್ಪಿಎಫ್, ಸಿಐಎಸ್ಎಫ್, ಐಟಿಬಿಪಿ ಅಂತಹ ನಿವೃತ್ತ ಯೋಧರುಗಳಿಗೆ ಸಿಗುವ ಸವಲತ್ತುಗಳಾದ ಸಿಎಸ್ಡಿ ಕ್ಯಾಂಟೀನ್ ಸೌಲಭ್ಯ ಮತ್ತು ಮಧ್ಯದ ಪೂರೈಕೆ, ಸೈನಿಕ ಕಲ್ಯಾಣ ಬೋರ್ಡ್ನ ಸೌಲಭ್ಯಗಳು ಮತ್ತು ಪುನರ್ ಉದ್ಯೋಗದ ಅವಕಾಶ, ವಿಧವೆಯರಿಗೆ ಸರ್ಕಾರಿ ಉದ್ಯೋಗ ಹಾಗೂ ಪುನರ್ ವಸತಿಗಳಂತಹ ಸೌಲಭ್ಯಗಳಿಂದ

ಕೊಡಗು ಜಿಲ್ಲೆಯವರು ವಂಚಿತರಾಗಿದ್ದಾರೆ. ಅವರುಗಳಿಗೂ ಈ ಸೌಲಭ್ಯಗಳನ್ನು ಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು, ಶಾಸನರಚನೆ ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು) (ಮಾನ್ಯ ಗೃಹ ಸಚಿವರ ಪರವಾಗಿ):– ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರುಗಳು ಕೇಳಿರುವುದಕ್ಕೆ ಸಂಬಂಧಿಸಿದಂತೆ ಉತ್ತರವನ್ನು ಕೊಟ್ಟಿದ್ದೇನೆ.

ಶ್ರೀ ಕೆ.ಜಿ. ಬೋಪಯ್ಯ:– ನನಗೆ ಉತ್ತರದ ಪ್ರತಿಯು ಈಗ ತಲುಪಿದೆ.

ಅಧ್ಯಕ್ಷರು:– O.K.

ದಿನಾಂಕ 03.02.2015 ರಂದು ಶ್ರೀ ಕೆ.ಜಿ. ಬೋಪಯ್ಯ, ವಿಧಾನಸಭಾ ಸದಸ್ಯರು ಇವರು ರಕ್ಷಣಾ ವ್ಯವಸ್ಥೆಯನ್ನು ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದ ಸೈನಿಕರಿಗೆ ನೀಡಲಾಗುವ ವಿವಿಧ ಸೌಲಭ್ಯಗಳನ್ನು ಅರೆ ಸೇನಾ ಪಡೆಯ ಯೋಧರಿಗೂ ಸಹ ವಿಸ್ತರಿಸುವ ಸಲುವಾಗಿ ಈ ವಿಷಯವನ್ನು ದಿನಾಂಕ 04.02.2015 ರಂದು ಶೂನ್ಯ ವೇಳೆಯಲ್ಲಿ ಚರ್ಚಿಸಲು ಅನುಮತಿ ನೀಡುವಂತೆ ಕೋರಿದ್ದಾರೆ. ಈ ವಿಷಯ ಪರಿಶೀಲಿಸಲಾಗಿದೆ.

ರಾಜ್ಯ ಸರ್ಕಾರದ ವತಿಯಿಂದ ರಕ್ಷಣಾ ಪಡೆಗಳ ಹುತಾತ್ಮಕ ಯೋಧರಿಗೆ ಈಗಾಗಲೇ ಕೆಳಕಂಡ ಸೌಲಭ್ಯಗಳನ್ನು ನೀಡಲಾಗುತ್ತಿದೆ.

1. ಯುದ್ಧದಲ್ಲಿ ಮಾಡಿದ ಅಥವಾ ಪೂರ್ಣ ಅಂಗವಿಕಲರಾದ ಯೋಧರ ವಿಧವೆಯರಿಗೆ/ನಿಕಟ ಸಂಬಂಧಿಕರಿಗೆ/ಅವಲಂಬಿತರಿಗೆ ರೂ. 2 ಲಕ್ಷ ಎಕ್ಸ್ ಗ್ರೇಷಿಯಾ ಅನುದಾನ ಹಾಗೆಯೇ ಗಾಯಗೊಂಡವರಿಗೆ ಅಥವಾ ಕಾಣೆಯಾದವರಿಗೆ ರೂ. 50,000/– ಗಳ ಎಕ್ಸ್ ಗ್ರೇಷಿಯಾ ಅನುದಾನ.
2. ಯುದ್ಧ ಸಂತ್ರಸ್ತರಿಗೆ ಜಮೀನಿನ ಬದಲಾಗಿ ರೂ. 1 ಲಕ್ಷಗಳ ನಗದು ಅನುದಾನ.

3. ಉಚಿತವಾಗಿ ನಿವೇಶನ/ಮನೆ ನಿರ್ಮಿಸಲು ಸೈನಿಕರಿಗೆ ರೂ. 4.50 ಲಕ್ಷಗಳ ಅನುದಾನ ಹಾಗೂ ಅಧಿಕಾರಿ ಮತ್ತು ಜೆ.ಸಿ.ಓ ವರ್ಗದವರಿಗೆ ರೂ. 6 ಲಕ್ಷಗಳ ಅನುದಾನ.

ಬಿ.ಎಸ್.ಎಫ್, ಆರ್.ಪಿ.ಎಫ್, ಸಿ.ಆರ್.ಪಿ.ಎಫ್ ಮುಂತಾದ ಅರೆ ಮಿಲಿಟರಿ ಪಡೆಯ ಯೋಧರುಗಳು ಗಡಿ ರಕ್ಷಣೆ ಸಂದರ್ಭದಲ್ಲಿ ಅಥವಾ ರಾಷ್ಟ್ರದಲ್ಲಿನ ಆಂತರಿಕ ಸಂಘರ್ಷಗಳ ಸಂಧರ್ಭದಲ್ಲಿ ಭಾಗವಹಿಸಿ ಮರಣವನ್ನಪ್ಪಿದ್ದಾಗ ಅವರ ಅವಲಂಭಿತರಿಗೂ ಸಹ ಸೈನ್ಯದ ಯೋಧರಿಗೆ ನೀಡಲಾಗುತ್ತಿರುವ ಮೇಲಿನ ಎಲ್ಲಾ ಸೌಲಭ್ಯಗಳನ್ನು ವಿಸ್ತರಿಸಿದೆ.

ಅರೆ ಮಿಲಿಟರಿ ಪಡೆಗಳಾದ ಬಿ.ಎಸ್.ಎಫ್., ಸಿ.ಆರ್.ಪಿ.ಫ್., ಐ.ಟಿ.ಬಿ.ಪಿ., ಸಿ.ಐ.ಎಸ್.ಎಫ್., ಆರ್.ಪಿ.ಎಫ್., ಎಸ್.ಎಸ್.ಎಫ್. ಮುಂತಾದ ಅರೆ ಮಿಲಿಟರಿ ಪಡೆಗಳಲ್ಲಿ ನಿವೃತ್ತಿ ಹೊಂದಿದವರಿಗೆ ಸಿ.ಎಸ್.ಡಿ ಕ್ಯಾಂಟೀನ್ ಸೌಲಭ್ಯ ಮತ್ತು ಮದ್ಯದ ಪೂರೈಕೆ, ಸೈನಿಕ ಕಲ್ಯಾಣ ಬೋರ್ಡ್‌ನ ಸೌಲಭ್ಯಗಳು, ಪುನರ್ ಉದ್ಯೋಗದ ಅವಕಾಶ, ವಿಧವೆಯರಿಗೆ ಸರ್ಕಾರಿ ಉದ್ಯೋಗ ಹಾಗೂ ಪುನರ್ ವಸತಿಗಳಂತಹ ಸವಲತ್ತುಗಳನ್ನು ಒದಗಿಸುವಂತೆ ಮಾನ್ಯ ಸದಸ್ಯರು ಕೋರಿದ್ದಾರೆ.

ಈ ವಿಷಯವನ್ನು ಪರಿಶೀಲಿಸಲಾಗಿದ್ದು. ಬಿ.ಎಸ್.ಎಫ್., ಸಿ.ಆರ್.ಪಿ.ಎಫ್., ಐ.ಟಿ.ಬಿ.ಪಿ., ಸಿ.ಐ.ಎಸ್.ಎಫ್., ಆರ್.ಪಿ.ಎಫ್., ಎಸ್.ಎಸ್.ಎಫ್. ಮುಂತಾದ ಅರೆ ಮಿಲಿಟರಿ ಪಡೆಗಳ ನಿವೃತ್ತ ಯೋಧರುಗಳು ತಮಗೆ ಸಿಎಸ್‌ಡಿ ಕ್ಯಾಂಟಿನ್ ಸೌಲಭ್ಯವನ್ನು ಪಡೆಯುವ ಸಲುವಾಗಿ ಅವರಿಗೆ ಸಂಬಂಧಿಸಿದ ಕೇಂದ್ರ ಸರ್ಕಾರದ ಅರೆ ಮಿಲಿಟರಿ ಪಡೆಗಳ ಮಹಾ ನಿರ್ದೇಶನಾಲಯದ ಅನುಮೋದನೆಯನ್ನು ನೇರವಾಗಿ ಪಡೆದು ಕ್ರಮ ಜರುಗಿಸಬೇಕಾಗುತ್ತದೆ.

ಇನ್ನುಳಿದಂತೆ, ಮಾಜಿ ಸೈನಿಕರಿಗೆ ನೀಡಲಾಗುತ್ತಿರುವ ಸೈನಿಕ ಕಲ್ಯಾಣ ಬೋರ್ಡ್‌ನ ಸೌಲಭ್ಯಗಳು, ಪುನರ್ ಉದ್ಯೋಗದ ಅವಕಾಶ, ವಿಧವೆಯರಿಗೆ ಸರ್ಕಾರಿ ಉದ್ಯೋಗ ಹಾಗೂ ಪುನರ್ ವಸತಿಗಳಂತಹ ಸವಲತ್ತುಗಳನ್ನು ಅರೆ ಮಿಲಿಟರಿ ಪಡೆಯ ಯೋಧರಿಗೆ ವಿಸ್ತರಿಸುವ ಬಗ್ಗೆ ಸದ್ಯಕ್ಕೆ ಯಾವುದೇ

ಪ್ರಸ್ತಾವನೆಯು ಸರ್ಕಾರದ ಮುಂದೆ ಇರುವುದಿಲ್ಲ. ಆದಾಗ್ಯೂ ಸಹಿತ, ಮೇಲಿನ ಸೌಲಭ್ಯಗಳನ್ನು ಅರೆ ಮಿಲಿಟರಿ ಪಡೆಗಳಿಗೆ ವಿಸ್ತರಿಸುವ ಸಲುವಾಗಿ ಸೈನಿಕ ಕಲ್ಯಾಣ ಇಲಾಖೆಯಿಂದ ವಿವರವಾದ ಪ್ರಸ್ತಾವನೆಯನ್ನು ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು.

8. ವಿಷಯ: ಮುಧೋಳ್ ಪಟ್ಟಣಕ್ಕೆ ವರ್ತುಲ ರಸ್ತೆ ನಿರ್ಮಿಸುವ ಬಗ್ಗೆ.

ಶ್ರೀ ಗೋವಿಂದ ಎಂ. ಕಾರಜೋಳ (ಮುಧೋಳ):– ಮಾನ್ಯ ಅಧ್ಯಕ್ಷರೆ, ನನ್ನ ಮತ ಕ್ಷೇತ್ರದ ಮುಧೋಳ ಪಟ್ಟಣದಲ್ಲಿ ವಾಹನಗಳ ಸಂಖ್ಯೆಯು ಹೆಚ್ಚಾಗಿ ಪ್ರತಿನಿತ್ಯ accident ಗಳು ಆಗುತ್ತಿವೆ. Traffic jam ಆಗುತ್ತಿದೆ. ನನ್ನ ಮತ ಕ್ಷೇತ್ರದಲ್ಲಿ 7 ಸಕ್ಕರೆ ಕಾರ್ಖಾನೆಗಳು 4 ಸಿಮೆಂಟ್ ಕಾರ್ಖಾನೆಗಳು ಇರುವುದರಿಂದ Tractor-Trailer ಗಳು, truck ಗಳು, Bullock cart ಗಳು ಮೊಲಾಸಿಸ್ ಸಾಗಾಣಿಕೆ ಮಾಡತಕ್ಕಂತಹ Tractor ಗಳು, Tanker ಗಳು ಹೆಚ್ಚಾಗಿ ಓಡಾಡುವುದರಿಂದ ಕಳೆದ 5 ವರ್ಷಗಳಲ್ಲಿ ಸುಮಾರು 900 accidents ಗಳು ಆಗಿವೆ. ಇದರಿಂದಾಗಿ ಸುಮಾರು 400 ಜನರು ಸತ್ತುಹೋಗಿದ್ದಾರೆ. ಅದಕ್ಕಾಗಿ ಮುಧೋಳ ಪಟ್ಟಣಕ್ಕೆ ಒಂದು ವರ್ತುಲ ರಸ್ತೆಯು ಅಗಬೇಕೆಂದು ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇನೆ. ಈಗಾಗಲೇ ವರ್ತುಲ ರಸ್ತೆಗೆ ಸಂಬಂಧಿಸಿದಂತೆ sanction ಆಗಿದೆ. ಈ ಬಗ್ಗೆ ಏಕೆ ವಿಳಂಬ ಮಾಡುತ್ತಿದ್ದಾರೆ, ಎನ್ನುವುದರ ಬಗ್ಗೆ ಸರ್ಕಾರವು ನಿರ್ದಿಷ್ಟವಾದಂತಹ ಉತ್ತರವನ್ನು ಕೊಡಬೇಕು.

ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು, ಶಾಸನರಚನೆ ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು):– ಮಾನ್ಯ ಅಧ್ಯಕ್ಷರೆ, ಈ ವಿಚಾರದಲ್ಲಿ ತ್ವರಿತವಾದಂತಹ ಕ್ರಮವನ್ನು ವಹಿಸುವುದಕ್ಕೋಸ್ಕರ ಈ ಬಗ್ಗೆ ಸೂಚನೆಯನ್ನು ಕೊಡಿಸುತ್ತೇವೆ. ಸಂಬಂಧಪಟ್ಟಂತಹ ಸಚಿವರಿಂದ ಉತ್ತರವನ್ನು ಕೊಡಿಸುತ್ತೇನೆ.

ಅಧ್ಯಕ್ಷರು:– ಆಯಿತು.